

# ಇಬ್ಬನಿ ಬರೆದ ಬೆಳಕಿನ ಕಾವ್ಯ!



■ ಚಿತ್ರ ಬರಹ:
**ಗಣಪತಿ ಬಾಳೆಗದ್ದೆ**

ಇಬ್ಬನಿಗೆ ಜೀವ ಬರೋದೇ ಬೆಳಕಿನಿಂದ. ಎಳೆಬಿಸಿಲಿಗೆ ಮೈಯೊಡ್ಡಿ ನಿಂತ ಅವುಗಳ ಸೌಂಧರ್ಯವನ್ನು ಯಾರಿಂದಲೂ ಅಲ್ಲಗಳೆಯಲು ಸಾಧ್ಯವಿಲ್ಲ. ಅವುಗಳು ಬೆಳಕಿನ ಮೋಹಕ ಉಡುಗೆ ಉಟ್ಟು ಕಂಗೊಳಿಸುತ್ತವೆ.

ರಾತ್ರಿಯಿಡೀ ಆಕಾಶದಲ್ಲಿ ಮಿನುಗುತ್ತಿದ್ದ ನಕ್ಷತ್ರಗಳು ನಸುಕಿಗೇ ಕರಗಿ ಬುವಿಗಿಳಿದ ಹಾಗೆ! ಗಿಡ ಬಳ್ಳಿಗಳ ಎಲೆ ಎಲೆಗಳ ಮೇಲೂ ಕುಳಿತು ಇಬ್ಬನಿಗಳು ಹೊಳೆಯುತ್ತಿರುತ್ತವೆ. ಯೌವನದ ಮೊದಲ ನೋಟಕ್ಕೆ ಮಿನುಗಿದ ಕಣ್ಣುಗಳ ಹಾಗೆ! ಅಥವಾ ಆ ಕಣ್ಣುಗಳ ಹೊಳಪೆಲ್ಲ ಇಬ್ಬನಿಗಳು ಪಡೆದ ಹಾಗೆ! ಬೆಳಕಿಗೆ ಅವು ನಾಚುತ್ತವೆ. ನಾಚುತ್ತಲೇ ಚೆಲುವ ಸೂಸುತ್ತವೆ.  ಪ್ರತಿ ವರುಷದ ಚಳಿಗಾಲವೂ ಕಣ್ಣಿಗೆ ಹೊಸದಾಗಿಯೇ ಕಾಣಿಸುತ್ತದೆ ಈ ಇಬ್ಬನಿ.

ನಸುಕಿಗೇ ಎದ್ದು ಅವುಗಳನ್ನು ನೋಡುವುದು ಬಹಳ ಖುಷಿಯ ಸಂಗತಿ. ಆಗೆಲ್ಲ ಅವು ಕೈ ಕಾಲುಗಳಿಗೆ ತಾಗಿ ಮುದ ನೀಡುತ್ತವೆ. ಎದೆಯೊಳಗಿಳಿದು ಅದೆಂಥದೋ ಮಧುರ ಭಾವದ ಅಲೆ ಹೊಮ್ಮಿಸುತ್ತವೆ. ಅಂಥ ಇಬ್ಬನಿಗಳ ಚಿತ್ರ ಮತ್ತೆ ಮತ್ತೆ ಕ್ಲಿಕ್ಕಿಸಿಕೊಳ್ಳುತ್ತೇನೆ. ನನ್ನಂತೆಯೇ ಅವು ಕಂಡವರಿಗೂ ಖುಷಿ ನೀಡಬಲ್ಲವೆಂದು ಭಾವಿಸುತ್ತೇನೆ. ●